ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-3 Issue 3, Nov-Dec 2021, Pp 33-38
©*IIMRD*, Mysuru
www.iimrd.com

# ನರಹಳ್ಳಿ ಚಿಂತನೆಯಲ್ಲಿ ಅ.ನ.ಕೃ. ರವರ ರಾಷ್ಟ್ರೀಯತೆ, ಸಿದ್ಧಾಂತ ಮತ್ತು ಸ್ವರೂಪ

**ರವಿಕುಮಾರ್. ಸಿ.[1]; ಡಾ. ಶಿವಣ್ಣ. ಎಸ್.[2]**

[1]ಸಂಶೋಧನಾರ್ಥಿ, ಡಾ. ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

[2]ಸಹಾಯಕ ಪ್ರಾಧ್ಯಾಪಕರು, ತುಮಕೂರು ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

## ಸಾರಾಂಶ (Abstract)

*ಅ.ನ.ಕೃ.ರವರ ಕನ್ನಡ ಸಂಸ್ಕೃತಿಯೊಟ್ಟಿಗೆ ಅವರೊಳಗಿನ ಹಲವು ಆದ್ಯತೆಗಳನ್ನು ಗುರುತಿಸಿಕೊಂಡಿದ್ದಾರೆ. ಅ.ನ.ಕೃ. ಸ್ವಾತಂತ್ರ್ಯ ಹೋರಾಟದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡಿದ್ದಾರೆ ಹಾಗು ಪ್ರಾರಂಭದ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟದ ಗಾಢ ಛಾಯೆ ಅವರನ್ನು ಆವರಿಸಿತ್ತು. ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುತ್ತಲೇ ರಾಷ್ಟ್ರೀಯತೆಯನ್ನು ತನ್ನದಾಗಿಸಿಕೊಂಡಂತಹ ಅ.ನ.ಕೃ. ಅವರಲ್ಲಿ ಭಾರತೀಯ ಸಂಸ್ಕೃತಿ ಮತ್ತು ರಾಷ್ಟ್ರೀಯತೆಯ ಬಗ್ಗೆ ದೃಢವಾದ ವಿಶ್ವಾಸವಿತ್ತು. ಇದನ್ನೇ ಅವರ ಕೃತಿಗಳಲ್ಲಿ ನಾವು ಕಾಣಬಹುದಾಗಿದೆ. ಈ ವಿಷಯವಾಗಿಯೇ ಹಲವು ವಿಮರ್ಶಕರು ಅ.ನ.ಕೃ.ರವರ ವೈಚಾರಿಕತೆ ರಾಷ್ಟ್ರೀಯ ಮತ್ತು ದೇಸಿ ಸಂಸ್ಕೃತಿ ಮತ್ತು ಧರ್ಮದ ನಡುವಿನ ದ್ವಂದ್ವ ಆಲೋಚನೆಯದ್ದಾಗಿತ್ತೆಂದು ವಿಶ್ಲೇಷಿಸಿದ್ದಾರೆ.*

**ಮುಖ್ಯಪದಗಳು (Keywords):** ರಾಷ್ಟ್ರೀಯತೆ, ಸಿದ್ಧಾಂತ, ಏಕೀಕರಣ, ಪರಿಕಲ್ಪನೆ, ದೇಶಭಕ್ತಿ, ದೇಸಿ ಸಂಸ್ಕೃತಿ, ಸಮಗ್ರತೆ, ಕಾಲಘಟ್ಟ.

### ಪೀಠಿಕೆ

ಕನ್ನಡ ನಾಡು, ನುಡಿ, ಏಕೀಕರಣದ ಸಂದರ್ಭದಲ್ಲಿ ಮರೆಯಲಾರದ ಹೆಸರು ಅ.ನ.ಕೃ. ನರಹಳ್ಳಿಯವರು ಅ.ನ.ಕೃ.ರವರ ಕನ್ನಡ ಸಂಸ್ಕೃತಿಯೊಟ್ಟಿಗೆ ಅವರೊಳಗಿನ ಹಲವು ಆದ್ಯತೆಗಳನ್ನು ಗುರುತಿಸುತ್ತಾರೆ. ಅದರಲ್ಲಿ ಪ್ರಮುಖವಾದುದು ಅವರ ರಾಷ್ಟ್ರೀಯತೆಯ ಸಿದ್ಧಾಂತ ಅದಕ್ಕೆ ಕಾರಣ ಮೂಲತಃ ಅ.ನ.ಕೃ. ಸ್ವಾತಂತ್ರ್ಯ ಹೋರಾಟದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಂಡಿದ್ದಾಗಿದೆ. ಪ್ರಾರಂಭದ ದಿನಗಳಲ್ಲಿ ಸ್ವಾತಂತ್ರ್ಯ ಹೋರಾಟದ ಗಾಢ ಛಾಯೆ ಅವರನ್ನು ಆವರಿಸಿತ್ತು. ತಂದೆ ನರಸಿಂಗರಾಯರು ಬ್ರಿಟೀಷರ ಪರವಾಗಿದ್ದರೆ ಅ.ನ.ಕೃ., ಅವರಿಗೆ ಭಿನ್ನವಾಗಿದ್ದರು. ಬ್ರಿಟೀಷರಿಂದಲೇ ಸದೃಢ ನಾಯಕತ್ವ ಸಾಧ್ಯ ಎನ್ನುವ ಆಲೋಚನೆಗೆ ಬದ್ಧರಾಗಿದ್ದ ತಂದೆಯ ಎಲ್ಲ ಕಂದಾಚಾರಗಳಿಗೆ ವಿರುದ್ಧವಾಗಿ ನಿಂತದ್ದು ಅ.ನ.ಕೃ.

*Please cite this article as: ರವಿಕುಮಾರ್. ಸಿ. ಮತ್ತು ಶಿವಣ್ಣ. ಎಸ್. (2021).* ನರಹಳ್ಳಿ ಚಿಂತನೆಯಲ್ಲಿ ಅ.ನ.ಕೃ. ರವರ ರಾಷ್ಟ್ರೀಯತೆ, ಸಿದ್ಧಾಂತ ಮತ್ತು ಸ್ವರೂಪ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(3). ಪು.ಸಂ. 33–38*

ಪ್ರಭುತ್ವದ ಪರವಿದ್ದ ಸಂಪ್ರದಾಯ ನಿಷ್ಠರಾದ ತಂದೆ ಅದಕ್ಕೆ ಸಂಪೂರ್ಣ ವಿರುದ್ಧವಿದ್ದ ಅ.ನ.ಕೃ. ಅವರ ರಾಷ್ಟ್ರೀಯ ವಿಚಾರಧಾರೆ ಸಮಕಾಲೀನ ರಾಜಕೀಯ ವ್ಯವಸ್ಥೆಗೆ ರಾಷ್ಟ್ರೀಯ ಪರಿಕಲ್ಪನೆಯೊಂದಿಗೆ ಅರಳಿದರು. ಅ.ನ.ಕೃ. ಕಾಂಗ್ರೆಸ್ ಪರವಾಗಿದ್ದು, ತಿಲಕರು ನಿಧನರಾದಾಗ ನಂತರದಲ್ಲಿ ನಡೆದ ರಾಜಕೀಯ ಪ್ರತಿಭಟನೆಗಳಲ್ಲಿ ಸಕ್ರಿಯರಾಗುತ್ತಾರೆ. ಗಾಂಧಿಮಾರ್ಗವನ್ನು ಅನುಸರಿಸುತ್ತಾರೆ. 'ಖಾದಿ ನನಗೆ ದೇಶಭಕ್ತಿಯನ್ನಲ್ಲದೇ ಸ್ವಾವಲಂಬನೆ ಕಲಿಸಿತು' ಎನ್ನುವ ಅವರ ನುಡಿ ಅವರ ಬರವಣಿಗೆಗೆ ಮಾರ್ಗಸೂಚಿಯಾಗಿದೆ. ಹೀಗೆ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುತ್ತಲೇ ರಾಷ್ಟ್ರೀಯತೆಯನ್ನು ತನ್ನದಾಗಿಸಿಕೊಂಡಂತಹ ಅ.ನ.ಕೃ. ಅವರಲ್ಲಿ ಭಾರತೀಯ ಸಂಸ್ಕೃತಿ ಮತ್ತು ರಾಷ್ಟ್ರೀಯತೆಯ ಬಗ್ಗೆ ದೃಢವಾದ ವಿಶ್ವಾಸವಿತ್ತು. ಇದನ್ನೇ ಅವರ ಕೃತಿಗಳಲ್ಲಿ ನಾವು ಕಾಣಬಹುದಾಗಿದೆ. ಈ ವಿಷಯವಾಗಿಯೇ ಹಲವು ವಿಮರ್ಶಕರು ಅ.ನ.ಕೃ.ರವರ ವೈಚಾರಿಕತೆ ರಾಷ್ಟ್ರೀಯ ಮತ್ತು ದೇಸಿ ಸಂಸ್ಕೃತಿ ಮತ್ತು ಧರ್ಮದ ನಡುವಿನ ದ್ವಂದ್ವ ಆಲೋಚನೆಯದ್ದಾಗಿತ್ತೆಂದು ವಿಶ್ಲೇಷಿಸಿದ್ದಾರೆ.

ಆದರೆ ನರಹಳ್ಳಿಯವರು ಅದೊಂದು ಪೂರಕ ಸಿದ್ಧಾಂತವೇ ಹೊರತು ಬೇರೆ ಬೇರೆಯಲ್ಲ ಎಂದು ಸಮರ್ಥಿಸಿಕೊಳ್ಳುತ್ತಾರೆ. ನಾವು ಎರಡು ದೃಷ್ಟಿಕೋನ ವಿಶ್ಲೇಷಿಸಿದಾಗ ನಮಗೆ ದಕ್ಕುವ ವಿಷಯವೆಂದರೆ ಎರಡು ಸಿದ್ಧಾಂತಗಳನ್ನು ಪ್ರತ್ಯೇಕಿಸಿ ನೋಡಿದಾಗ ದ್ವಂದ್ವ ಭಾವವು ಕಾಣುವುದು ಸಹಜ. ಆದರೆ ಪ್ರಾಚೀನ ಭಾರತದ ಪರಿಕಲ್ಪನೆಯಲ್ಲಿ ಸಮಗ್ರ ರಾಷ್ಟ್ರೀಯತೆ ಮತ್ತು ದೇಸಿ ಚಿಂತನೆ ಆಯಾ–ಆಯಾ ಕಾಲಘಟ್ಟಕ್ಕೆ ಹೊಂದಿಕೊಂಡಂತೆ ಬೆಸೆದುಕೊಂಡಿರುವುದರಿಂದ ನರಹಳ್ಳಿಯವರ ವಾದಕ್ಕೆ ಪ್ರಾಶಸ್ತ್ಯ ಕೊಡಬೇಕಾಗುತ್ತದೆ. ಹಾಗೆಯೇ ಇದಕ್ಕೆ ಪೂರಕವಾಗಿ ಹೇಳಬೇಕಾದರೆ ಸಮಗ್ರತೆಯ ದೃಷ್ಟಿಯಿಂದ ಭಾರತದ ರಾಷ್ಟ್ರೀಯತೆಯನ್ನು ಪ್ರತಿನಿಧಿಸುತ್ತಿದ್ದ ಅ.ನ.ಕೃ. ಹಿಂದಿ ಪ್ರಚಾರ ಸಮಿತಿಯಲ್ಲಿದ್ದಾರೆಂಬ ಕಾರಣಕ್ಕೆ ಕರ್ನಾಟಕ ಏಕೀಕರಣದ ಕಟ್ಟಾಳು ದಿವಾಕರ್‌ರವರನ್ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರ ಸ್ಥಾನಕ್ಕೆ ಅನರ್ಹನೆಂದು ಭಾವಿಸಿದ್ದು, ಅವರೊಳಗಿನ ರಾಷ್ಟ್ರೀಯತೆಯ ಪರಿಕಲ್ಪನೆ ಮತ್ತು ದೇಸಿ ಸಂಸ್ಕೃತಿಯ ನಡುವಿನ ಭಿನ್ನ ಸಿದ್ಧಾಂತಗಳ ಬಗ್ಗೆ ಇದ್ದ ಅವರ ಸ್ಪಷ್ಟತೆಯನ್ನು ತೋರುತ್ತದೆ. ಅ.ನ.ಕೃ. ಸಮಗ್ರತೆಯ ದೃಷ್ಟಿಯಿಂದ ರಾಷ್ಟ್ರೀಯವಾದಿಯಾದರೂ ಸ್ವಂತ ಸಾಂಸ್ಕೃತಿಕ ನೆಲೆಗಟ್ಟಿನ ವಿಷಯಕ್ಕೆ ಬಂದರೆ ಅಪ್ಪಟ ದೇಸಿ ಕನ್ನಡ ಸಂಸ್ಕೃತಿಯ ಅಗ್ರ ಪ್ರತಿಪಾದಕರಾಗಿದ್ದಾರೆ.

ಭಾರತೀಯ ಸಂಸ್ಕೃತಿಯನ್ನು ದೇಹವನ್ನಾಗಿಯೂ ಕನ್ನಡ ಸಂಸ್ಕೃತಿಯನ್ನು ಆತ್ಮವನ್ನಾಗಿಯೂ ಗುರುತಿಸಿರುವ ಅ.ನ.ಕೃ. ತಮ್ಮ ನಾಟಕ, ಕತೆ, ಸಾಮಾಜಿಕ ಕಾದಂಬರಿಗಳಲ್ಲಿ ದೇಸಿ ಸಂಸ್ಕೃತಿಯನ್ನು ಅತ್ಯಂತ ಪ್ರಬುದ್ಧವಾಗಿ ದುಡಿಸಿಕೊಂಡಿದ್ದಾರೆ. ಹಾಗೆಯೇ ಐತಿಹಾಸಿಕ ಕಾದಂಬರಿ ಮಾಲೆಯಲ್ಲಿ ಅವರು ಬರೆದ ವಿಜಯನಗರ ಸಾಮ್ರಾಜ್ಯ ಕುರಿತಾದ ಹತ್ತು ಕಾದಂಬರಿಗಳ ಮಾಲಿಕೆಯಲ್ಲಿ ಭಾರತೀಯ ರಾಷ್ಟ್ರೀಯತೆಯ ಪ್ರತಿಪಾದಕರಾಗಿ ನಿಂತಿದ್ದಾರೆ. ಅವರೇ ಹೇಳುವಂತೆ 'ಭಾರತೀಯ ಸಂಸ್ಕೃತಿಯನ್ನು ವಿಜಯನಗರ ಸಾಮ್ರಾಜ್ಯ ವಿಶೇಷವಾಗಿ ಪ್ರೋತ್ಸಾಹಿಸಿ ಬೆಳೆಸಿತು. ಅದರ ಸಂಸ್ಕೃತಿಯನ್ನು ಅರ್ಥಮಾಡಿಕೊಂಡರೆ ಭಾರತೀಯ ಸಂಸ್ಕೃತಿಯ ಜೀವವಾಹಿನಿ ಅರಿತಂತೆ. ಭಾರತೀಯರ ಬದುಕಿಗೆ ಚಿರಕಾಲ ಶಾಂತಿ ನೀಡುವ ಶಕ್ತಿ ವಿಜಯನಗರದ ಕಾಲದ ಸಂಸ್ಕೃತಿಗಿದೆ. ಇದು ಅ.ನ.ಕೃ.ರವರ ನಂಬಿಕೆಯಾಗಿತ್ತು. ಈ ನಂಬಿಕೆಯೇ ಅವರ

ಕಾದಂಬರಿ ರೂಪಿಸಲು ಕಾರಣವಾಗಿದೆ ಎಂದು ಅಭಿಪ್ರಾಯಪಡುತ್ತಾ ಇವು ಕೇವಲ ರಾಜಕೀಯ ಇತಿಹಾಸ ಮಾತ್ರವಲ್ಲ ಸಾಂಸ್ಕೃತಿಕ ಸ್ವರೂಪ ತಿಳಿಸುತ್ತವೆಂದು ಹೇಳುತ್ತಾರೆ. ಹಾಗೆಯೇ ದೇಸಿ ಸಂಸ್ಕೃತಿಯನ್ನು ಐತಿಹಾಸಿಕ ಕಾಲಘಟ್ಟದಲ್ಲಿ ನಿರೂಪಿಸಲು ಕಿತ್ತೂರರಾಣಿ ಚೆನ್ನಮ್ಮ, ಯಲಹಂಕ ಭೂಪಾಲ ಕೆಂಪೇಗೌಡ ಅವರ ಬಗ್ಗೆಯೂ ಕಾದಂಬರಿ ಬರೆದು ವಿಫುಲವಾಗಿ ದೇಸಿ ನೆಲೆಗಟ್ಟನ್ನು ಸಮರ್ಥಿಸುತ್ತಾರೆ.

ನಾವು ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಎರಡು ಪ್ರತ್ಯೇಕ ಧಾರೆಗಳನ್ನು ಪ್ರತ್ಯೇಕವಾಗಿಯೇ ಪೋಷಿಸುತ್ತಾ ಅವುಗಳ ನಡುವೆ ಸಾಮ್ಯತೆ ಸಾಧಿಸಿರುವ ರೀತಿ. ಇದು ಅ.ನ.ಕೃ.ರವರಿಂದ ಮಾತ್ರ ಸಾಧ್ಯ. ಈ ನಿಟ್ಟಿನಲ್ಲಿ ಕನ್ನಡದ ಬಹಳಷ್ಟು ಬರಹಗಾರರು ಬರೆದರಾದರೂ ವಿಭಿನ್ನ ಸಾಂಸ್ಕೃತಿಕ ಆಯಾಮಗಳನ್ನು ಒಂದೇ ಆಯಾಮವನ್ನಾಗಿ ಚಿತ್ರಿಸುವಲ್ಲಿ ಅ.ನ.ಕೃ.ರವರು ಯಶಸ್ವಿಯಾಗಿದ್ದಾರೆಂಬುದು ಅಭಿಪ್ರಾಯವಾಗಿದೆ.

ಒಟ್ಟಾರೆ ಆ ಕಾಲಘಟ್ಟದ ರಾಷ್ಟ್ರೀಯತೆಯ ಹೆದ್ದಾರಿಯೊಂದಿಗೆ ಸಂಗಮಿಸಿದ್ದ ಅ.ನ.ಕೃ. ಏಕೀಕರಣ ಚಳುವಳಿಯಲ್ಲೂ ಭಾಗವಹಿಸಿದ್ದರ ಪರಿಣಾಮ ಎರಡು ಪ್ರತ್ಯೇಕ ಸಾಂಸ್ಕೃತಿಕ ಸಿದ್ಧಾಂತಗಳನ್ನು ಸಂಯೋಜಿಸಿ ಅದಕ್ಕೆಂದು ತಾತ್ವಿಕ ನೆಲೆಗಟ್ಟು ನೀಡಿದ ಶ್ರೇಯಕ್ಕೆ ಭಾಜನರಾಗಿದ್ದಾರೆ. ನರಹಳ್ಳಿಯವರು ಅ.ನ.ಕೃ. ತಮ್ಮ ವ್ಯಕ್ತಿತ್ವವನ್ನು ಕನ್ನಡ ಸಂಸ್ಕೃತಿಯ ಸರ್ವಾಂಗೀಣ ಬೆಳವಣಿಗೆಗೆ ಇಡಿಯಾಗಿ ಒಪ್ಪಿಸಿಕೊಂಡವರು. ವಿವಿಧ ಸ್ತರಗಳಲ್ಲಿ ಕನ್ನಡದ ಕೆಲಸ ಮಾಡಿದವರು. "ಕನ್ನಡತನ ಅವರಿಗೆ ಉಸಿರಾಟದಷ್ಟೇ ಮುಖ್ಯವಾಗಿತ್ತು. ಪ್ರತಿಷ್ಠೆಗಾಗಿ ಕನ್ನಡದ ಕೆಲಸ ಮಾಡಲಿಲ್ಲ. ಅದು ಅವರಿಗೆ ಬದುಕಾಗಿತ್ತು. ಅವರದ್ದು ಸರ್ವ ಕನ್ನಡಮಯ ಜಗತ್ತು" ಎಂದು ಹೇಳುತ್ತಲೇ ಅ.ನ.ಕೃ.ರವರ ಕನ್ನಡದೊಂದಿಗಿನ ಬದ್ಧತೆಯನ್ನು ಅನಾವರಣಗೊಳಿಸಿದ್ದಾರೆ. ಬಹುಶಃ ಕನ್ನಡಕ್ಕಾಗಿ ಹೋರಾಡಿದ ಎಲ್ಲ ಮಹನೀಯರ ಪಟ್ಟಿಯಲ್ಲಿ ಅ.ನ.ಕೃ. ಅಗ್ರಪಂಕ್ತಿಯಲ್ಲಿ ನಿಲ್ಲುವುದು ಪ್ರಶ್ನಾತೀತ.

ಹಿಂದೆ ಅ.ನ.ಕೃ. ಗುರುದೇವ ರವೀಂದ್ರನಾಥ ಠಾಗೂರರನ್ನು ನೋಡಲು ಬಂಗಾಳದ ಶಾಂತಿನಿಕೇತನಕ್ಕೆ ಹೋದಾಗ ರವೀಂದ್ರರ ಭಾಷಣದ ನಂತರ ಅನ್ಯಭಾಷಿಕ ಮತ್ತು ಬಂಗಾಳಿ ವಿದ್ಯಾರ್ಥಿಗಳಿಬ್ಬರು ಗುರು ರವೀಂದ್ರರನ್ನು ಏಕಕಾಲಕ್ಕೆ ತಮ್ಮ ಸಂದೇಹ ಕೇಳಿಕೊಂಡಾಗ ರವೀಂದ್ರರು ಅನ್ಯ ಭಾಷಿಕ ವಿದ್ಯಾರ್ಥಿಯನ್ನು ಉದ್ದೇಶಿಸಿ ನನ್ನ ಬಂಗಾಳಿ ಸ್ನೇಹಿತನಿಗೆ ನಾನು ಮೊದಲು ಉತ್ತರಿಸುತ್ತೇನೆ. ತಾವು ಕುಳಿತುಕೊಳ್ಳಿ ಎನ್ನುತ್ತಾರೆ. ಇದು ಯುವ ಅ.ನ.ಕೃ. ಮೇಲೆ ಗಾಢ ಪರಿಣಾಮ ಬೀರಿದೆ. ಬಹುಶಃ ನಾವು ಇದನ್ನು ಸೈದ್ಧಾಂತಿಕ ಘರ್ಷಣೆ ಎನ್ನದೆ ದೇಸಿ ಸಂಸ್ಕೃತಿಯ ವಿಕಾಸಕ್ಕೆ ಸಿಕ್ಕ ರುಜುವಾತು ಎನ್ನಬಹುದು.

ಅ.ನ.ಕೃ. ರವರಿಗೆ ಬಂಗಾಳಿಗಳ ಪ್ರಾಂತೀಯ ಪ್ರೇಮವು ತತ್ಕಾಲದಲ್ಲಿ ಆಕ್ರೋಶ ಉಂಟು ಮಾಡಿದರು. ಅದೊಂದು ದೇಸಿ ಸಂಸ್ಕೃತಿ ಮತ್ತು ಬೆಳವಣಿಗೆಗೆ ದೊಡ್ಡ ಮಟ್ಟದ ಜಾಗೃತಿಯನ್ನು ಮೂಡಿಸಿದೆ. ರಾಷ್ಟ್ರೀಯ ವಿಚಾರಗಳಲ್ಲಿ ಬಂಗಾಲಿ ಮರಾಠಿಯಾದಿಯಾಗಿ ಎಲ್ಲರ ಕೊಡುಗೆಯು ಅಪಾರವಾಗಿದ್ದರೂ ಸ್ಥಾನೀಯ ವಿಚಾರವಾಗಿ ತಮ್ಮ ದೇಸಿ ಸಂಸ್ಕೃತಿಗಳಿಗೆ ಕರ್ಮಠ ನಿಷ್ಠರಾಗಿರುವುದು ಆಯಾ ಪ್ರಾಂತ್ಯದ ದೇಸಿ ಸಂಸ್ಕೃತಿಯ ಬೆಳವಣಿಗೆಗೆ ಅತ್ಯಂತ ಮಹತ್ವದ್ದಾಗಿದೆ.

ಈ ನಿಟ್ಟಿನಲ್ಲಿ ಬಂಗಾಳಿಗಳು, ತಮಿಳರು, ಮಲೆಯಾಳರು, ಪಂಜಾಬಿಗಳೂ ಸೇರಿದಂತೆ ಹಲವು ಪ್ರಮುಖ ದೇಸಿ ಸಂಸ್ಕೃತಿಗಳು ತಮ್ಮ ಉಳಿವಿಗಾಗಿ ಕರ್ಮಠ ಸಿದ್ಧಾಂತವನ್ನು ಅನುಸರಿಸುತ್ತಿದ್ದು, ಅದೇ

ಸಿದ್ಧಾಂತ ಅವರಿಗೆ ರಾಷ್ಟ್ರೀಯ ಮಟ್ಟದಲ್ಲಿ ಮಹತ್ವವನ್ನು ತಂದುಕೊಟ್ಟರೆ ಇದೊಂದು ಕೇವಲ ಪ್ರಕರಣವಾಗಿರದೆ ಅ.ನ.ಕೃ. ರವರ ಪಾಲಿಗೆ ಒಂದು ಪಾಠವಾಗಿ ನಂತರದಲ್ಲಿ ಅ.ನ.ಕೃ. ಕನ್ನಡವೇ ಆಗಿ ಹೋದರು.

ನರಹಳ್ಳಿಯವರ ಈ ಕೃತಿ ಅ.ನ.ಕೃ. ರವರನ್ನು ಸಾಹಿತ್ಯಿಕವಾಗಿ ಪರಿಚಯಿಸುವುದು ಒಂದು ಭಾಗವಾದರೆ ಇನ್ನೊಂದು ಭಾಗವಾಗಿ ಅವರ ಕನ್ನಡದೇಸಿ ಸಂಸ್ಕತಿಯ ಪ್ರತಿಪಾದನೆಯನ್ನು ಅನಾವರಣಗೊಳಿಸುವುದೇ ಆಗಿದೆ. ನಿರಂಜನರು ಹೇಳಿರುವಂತೆ 'ಏಕೀಕರಣ ಪೂರ್ವದಲ್ಲಿ ಹಲವು ಆಡಳಿತದಲ್ಲಿ ನಾಡು ಹಂಚಿ ಹೋಗಿದ್ದ ವೇಳೆಯಲ್ಲೂ ಕನ್ನಡಿಗರನ್ನೆಲ್ಲ ಒಂದೇ ಮಕ್ಕಳೆಂಬ ಭಾವನೆಯನ್ನು ರೂಪಿಸಿದ ಕೀರ್ತಿ ಅ.ನ.ಕೃ.ರವರಿಗೆ ಸೇರಿಸುತ್ತದೆ. ತನ್ನತನದ ಅರಿವನ್ನು ಮೂಡಿಸಿ ಸತ್ತಂತವರನ್ನು ಬಡಿದೆಬ್ಬಿಸಿ ಕನ್ನಡದ ಚೇತನವನ್ನು ಜಾಗೃತಗೊಳಿಸಿದರೆಂದು ಅಭಿಪ್ರಾಯಪಟ್ಟಿದ್ದಾರೆ. ಇದು ಅವರ ಕನ್ನಡಾಭಿಮಾನಕ್ಕೆ ಸಂದ ದೊಡ್ಡ ಗೌರವ. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಸರಿಸುಮಾರು 2 ಶತಮಾನಗಳಿಗೂ ಅಧಿಕ ಕಾಲ ಕನ್ನಡ ಭಾಷೆ ಮತ್ತು ಸಂಸ್ಕೃತಿ ವಿಭಿನ್ನ ಧಾರೆಗಳ ನಡುವೆ ಹಂಚಿ ಹೋಗಿತ್ತು. ಅದರಲ್ಲೂ 4ನೇ ಆಂಗ್ಲೋ–ಮೈಸೂರು ಯುದ್ಧದ ನಂತರ ಕರ್ನಾಟಕ ಬಾಂಬೆ–ಮದ್ರಾಸ್, ಹೈದ್ರಾಬಾದ್–ಮರಾಠಗಳ ನಡುವೆ ಹಂಚಿ ಹೋಗಿದ್ದ ಕಾಲ. ಉತ್ತರ ಕರ್ನಾಟಕದ ಬಹುಭಾಗದ ಮೇಲೆ ಮರಾಠಿ ತೆಲುಗು, ಉರ್ದು ಭಾಷೆ ಮತ್ತು ಸಂಸ್ಕೃತಿಗಳು ಸವಾರಿ ಮಾಡುತ್ತಿದ್ದ ಸಂದರ್ಭದಲ್ಲಿ ಹಳೆ ಮೈಸೂರು ಭಾಗದಲ್ಲಿ ಮದ್ರಾಸಿಗರು ತಮ್ಮ ಪ್ರಾಬಲ್ಯವನ್ನು ಬೀರುತ್ತಿದ್ದ ಸಂದರ್ಭದಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿ ಉಳಿವಿಗಾಗಿ ಧ್ವನಿ ಎತ್ತಿದ ಅ.ನ.ಕೃ. ಅಂದಿನ ಕನ್ನಡದ ಶ್ರೇಷ್ಠ ಹೋರಾಟಗಾರರೂ, ಸಾಹಿತಿಗಳಾದ ಗಳಗನಾಥ ವೆಂಕಟಾಚಾರ್ಯ, ಆಲೂರು ವೆಂಕಟರಾಯರು, ಮಾಸ್ತಿಯವರ ಸಾಲಿನಲ್ಲಿ ನಿಲ್ಲುತ್ತಾರೆ.

ಕನ್ನಡ ಸಂಸ್ಕೃತಿಯ ಮಹಾಧಾರೆಯ ಪ್ರಬಲ ಪ್ರತಿಪಾದಕರನ್ನಾಗಿ ನರಹಳ್ಳಿಯವರು ಅ.ನ.ಕೃ.ರವರನ್ನು ಗುರುತಿಸಲು ಪ್ರಮುಖ ಕಾರಣ ಅವರಲ್ಲಿದ್ದ ಕನ್ನಡ ಪರ ಬದ್ಧತೆ ಅ.ನ.ಕೃ., ಕ್ರಾನಿಕಲ್ ಪತ್ರಿಕೆಯ ವರದಿಗಾರರಾಗಿ ಮುಂಬೈನಲ್ಲಿ ಬದುಕುತ್ತಿದ್ದರೂ ಅವರಿಗೆ ಕನ್ನಡದ ಸಂಬಂಧ ಬಿಟ್ಟಿರಲು ಸಾಧ್ಯವಾಗುವುದಿಲ್ಲ. ಅವರೇ ಹೇಳುವಂತೆ ಕನ್ನಡ ನೆಲಸ ಸೊಗಸು, ಕನ್ನಡ ಸಾಹಿತ್ಯ ರಚನೆಯ ಸಮಾಧಾನ ನನಗೆ ಮುಂಬೈನಲ್ಲಿದ್ದಾಗಲೇ ಅರಿವಾಯಿತು. ಹಾಗೆನ್ನಿಸಿದಾಗಲೇ ಬೆಂಗಳೂರಿನ ರೈಲು ಹತ್ತಿ ಬಿಟ್ಟೆ, ಇದು ಅವರೊಳಗಿನ ಕನ್ನಡದ ಸಾಕ್ಷಿ ಪ್ರಕಟವಾದ ಸಂದರ್ಭ. ನಂತರದಲ್ಲಿ ಕ.ಸಾ.ಪರಿಷತ್ತು ಕನ್ನಡ ನುಡಿ ಸಂಪಾದಕರಾಗಿದ್ದಾಗ, ಆರ್.ಆರ್.ದಿವಾಕರ್ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ ಕನ್ನಡ ನುಡಿ ಪತ್ರಿಕೆಯಲ್ಲಿ ಅವರ ವಿರುದ್ಧವಾಗಿ ಲೇಖನ ಬರೆದು ಟೀಕಿಸಿದರು. ಕಾರಣ ಆರ್.ಆರ್.ದಿವಾಕರ್ ಹಿಂದಿ ಪರಿಷತ್ತಿನ ಅಧ್ಯಕ್ಷರೂ ಆಗಿದ್ದು ಅವರು ಹಿಂದಿ ಪ್ರಸಾರ ಮಾಡಿದ್ದರು. ಈ ಸಂಬಂಧವಾಗಿ ಅಸಮಾಧಾನಗೊಂಡಿದ್ದ ದಿವಾಕರ್‌ರವರನ್ನು ಸಮಾಧಾನಗೊಳಿಸಲು ಅಂದಿನ ಕ.ಸಾ.ಪ. ಉಪಾಧ್ಯಕ್ಷರಾದ ಬಿ.ಎಂ.ಶ್ರೀ. ಮತ್ತೊಂದು ಲೇಖನವನ್ನು ಬರೆಯಲು ಅ.ನ.ಕೃ.ರವರಿಗೆ ಸೂಚಿಸಿದರೆ ಅ.ನ.ಕೃ. ಆ ಸ್ಥಾನವನ್ನೇ ತ್ಯಜಿಸಿದರು. ಆಗ ಅವರಿಗೆ ಎದುರಾದ ಪ್ರಶ್ನೆ ಕನ್ನಡಕ್ಕಾಗಿ ದುಡಿಯುವುದು. ಆ ಬಗ್ಗೆ ನಿಷ್ಠಯಿಂದಿರುವುದು ಅಪರಾಧವೆಂದು ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇಬ್ಬರೂ ಕನ್ನಡದ

ಕಟ್ಟಾಳುಗಳೇ ಆದರೆ ದಿವಾಕರ್ ರಾಷ್ಟ್ರೀಯ ವಾಹಿನಿಯಲ್ಲಿ ಅತ್ಯಂತ ಮುಂಚೂಣಿ ನಾಯಕತ್ವ ವಹಿಸಿದ್ದರು. ಅ.ನ.ಕೃ. ರಾಷ್ಟ್ರೀಯತೆಯೊಟ್ಟಿಗೆ ದೇಸಿ ಸಂಸ್ಕೃತಿಗೆ ಮಹತ್ವ ನೀಡಿದ್ದರು. ನರಹಳ್ಳಿಯವರು ಈ ಅಂಶವನ್ನು ಇಲ್ಲಿ ಉಲ್ಲೇಖಿಸಿ ದೇಸಿ ಸಂಸ್ಕೃತಿಯ ಮಹತ್ವವನ್ನು ಸೂಚ್ಯವಾಗಿಸಿದ್ದಾರೆ. ಆದರೆ ನಂತರದ ದಿನಗಳಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಆರ್.ಆರ್. ದಿವಾಕರ್ ತಮ್ಮನ್ನು ತಾವೇ ಒಡ್ಡಿಕೊಳ್ಳುತ್ತಾರೆ. ಅದಕ್ಕಾಗಿ ಅಮರಣಾಂತ ಉಪವಾಸ ಕೈಗೊಳ್ಳುತ್ತಾರೆ. ಅ.ನ.ಕೃ.ರವರ ಅಂದಿನ ಕನ್ನಡ ಸಾಂಸ್ಕೃತಿಕ ಬದ್ಧತೆಯ ಪರಿಣಾಮವನ್ನು ನಾವು ನಂತರದಲ್ಲಿ ದಿವಾಕರ್‌ರವರ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ರೂಪುಗೊಂಡ ಪಾತ್ರದ ಮೂಲಕ ನೋಡಬಹುದಾಗಿದೆ. ತ.ರಾ.ಸು.ರವರ ಈ ನುಡಿ ಈ ಸಂದರ್ಭದಲ್ಲಿ ಅ.ನ.ಕೃ. ರವರನ್ನು ದೇಸಿ ಸಂಸ್ಕೃತಿಯ ಪ್ರತಿಪಾದಕರನ್ನಾಗಿ ಕಟ್ಟಿಕೊಡುತ್ತದೆ. ಹುಟ್ಟಿನಿಂದಲೇ ಕನ್ನಡಿಗರಾದ ಅವರು ಜೀವನದಿಂದಲೂ ಕನ್ನಡಿಗರಾಗಿದ್ದರು. ಅವರ ಕುಲ ಕನ್ನಡ, ಧರ್ಮ, ಕನ್ನಡ ಕರ್ಮವು ಕನ್ನಡಕ್ಕೆ ಮೀಸಲು, ಸಾಂಸ್ಕೃತಿಕವಾಗಿ ಕನ್ನಡವನ್ನು ಶ್ರೀಮಂತಗೊಳಿಸಬೇಕೆನ್ನುವ ಅವರ ಹಪಹಪಿ ಇಡೀ ಕನ್ನಡನಾಡಿನಾದ್ಯಂತ ಚಳುವಳಿಯನ್ನು ಕಟ್ಟುವ ಮೂಲಕ ವ್ಯಕ್ತವಾಗುತ್ತಿತ್ತು.

ನರಹಳ್ಳಿಯವರು ಹೇಳುವಂತೆ ಕನ್ನಡ ಸಂಸ್ಕೃತಿಯನ್ನು ಎಲ್ಲ ದಿಕ್ಕಿನಿಂದಲೂ ಬೆಳೆಸುವುದು ಅ.ನ.ಕೃ. ಹಂಬಲವಾಗಿತ್ತು. ಸಾಹಿತ್ಯ ಕೇವಲ ವಿಲಾಸವಾಗದೆ ವಿಕಾಸದ ಸಾಧನವಾಗಬೇಕು. ಅದು ಜನ ಸಮುದಾಯಕ್ಕೆ ಶಿಕ್ಷಣ ನೀಡುವಂತಾಗಬೇಕು ಎಂದು ಅ.ನ.ಕೃ. ಸಂಸ್ಕೃತಿ ಕುರಿತು ವಿಮರ್ಶಿಸುತ್ತಾರೆ. ಅ.ನ.ಕೃ. ಕನ್ನಡ ಸಂಸ್ಕೃತಿಯ ಬಹುಮುಖಿ ಬೆಳವಣಿಗೆ ಬಗ್ಗೆ ಸದಾ ಚಿಂತಿಸುತ್ತಿದ್ದರ ಬಗ್ಗೆ ಗಮನ ಸೆಳೆದಿರುವ ನರಹಳ್ಳಿಯವರು ಜನ ಸಮುದಾಯಕ್ಕೆ ನೀಡುವ ಶಿಕ್ಷಣವು ದೇಸಿ ಸಂಸ್ಕೃತಿಯನ್ನು ಮೇಳೈಸಿಕೊಂಡು ರೂಪುಗೊಳ್ಳಬೇಕು. ಸಾಮಾನ್ಯ ಜನತೆಯೊಂದಿಗೆ ಸಾಹಿತ್ಯ ನಿಕಟ ಸಂಬಂಧ ಇಟ್ಟುಕೊಂಡು ಮಾರ್ಗದರ್ಶನ ಮಾಡಬೇಕು. ವಿಚಾರ ಪ್ರಚೋದನೆ, ಭಾವ ಶುದ್ಧಿ ಇವೆರಡು ಒಬ್ಬ ಲೇಖಕನ ನೈತಿಕ ಹೊಣೆಗಾರಿಕೆಯಾಗಬೇಕೆಂಬ ಅ.ನ.ಕೃ.ರವರ ಸಾಂಸ್ಕೃತಿಕ ಸಿದ್ಧಾಂತದ ಮೇಲೆ ನರಹಳ್ಳಿಯವರು ಬೆಳಕು ಚೆಲ್ಲುತ್ತಾರೆ. ಇಲ್ಲಿ ಒಬ್ಬ ಲೇಖಕ ತನ್ನ ಮಿತಿಯನ್ನು ವಿಸ್ತರಿಸಿಕೊಳ್ಳುತ್ತಾ ತನ್ನ ಕಾಲಘಟ್ಟದ ಸಾಂಸ್ಕೃತಿಕ ಪ್ರಭಾವವನ್ನು ಬೆಳಕನ್ನಾಗಿಸಿ ಸಾಮಾನ್ಯರ ನಡುವೆ ಹೊಳಪು ತೋರುವ ಕುಶಲ ಕರ್ಮಿಯಾಗುತ್ತಾನೆ. ಅದು ಬೌದ್ಧಿಕವಾಗಿ ಜನಸಾಮಾನ್ಯರನ್ನು ಮೇಲೆತ್ತುವ ವರ್ತಮಾನದ ತಲ್ಲಣಗಳಿಗೆ ಮುಖಾಮುಖಿಯಾಗಿಸಿ ಅದರೊಳಗಿನ ಸುಪ್ತ ಮನಸ್ಸನ್ನು ಜಾಗೃತಗೊಳಿಸಿ ಭವಿಷ್ಯತ್ತಿನ ಕಡೆ ರಚನಾತ್ಮಕವಾಗಿ ಅವನನ್ನು ಸಜ್ಜುಗಿಳಿಸುವುದು ಒಬ್ಬ ಲೇಖಕನ ಆದ್ಯ ಕರ್ತವ್ಯವಾಗಿದ್ದು, ಅದನ್ನೇ ಅ.ನ.ಕೃ. ಪ್ರೇರೇಪಿಸಿರುವುದನ್ನು ನರಹಳ್ಳಿಯವರು ಅತ್ಯಂತ ಸರಳವಾಗಿ ನೀಡಿದ್ದಾರೆ.

**ಉಪಸಂಹಾರ**

ಕನ್ನಡದ ಸಾಹಿತ್ಯ ವಲಯದಲ್ಲಿ ಹತ್ತು ಹಲವು ಪ್ರಕಾರಗಳ ಮೇಲೆ ಅನ್ಯ ಭಾಷೆಗಳ ವಿಶೇಷವಾಗಿ ಆಂಗ್ಲ ಭಾಷೆಯ ಪ್ರಭಾವವನ್ನು ಅತ್ಯಂತ ಸಮಯೋಚಿತ ನೆಲೆಗಟ್ಟಿನಲ್ಲಿ ಸ್ವೀಕರಿಸಿರುವ ಅ.ನ.ಕೃ. ಅದು ಸಾಂಸ್ಕೃತಿಕ ವಿಸ್ತಾರವೇ ಹೊರತು ಸಂಕುಚಿತ ಪರಿವರ್ತನೆ ಅಲ್ಲವೆಂದು ಹೇಳುತ್ತಾರೆ. ಹಾಗೆ ಅವರ ಕನ್ನಡದ ಬಗೆಗಿನ ಬದ್ಧತೆ ಅವರೊಳಗೊಬ್ಬ ಹೋರಾಟಗಾರನ ಸೃಷ್ಟಿಸುತ್ತದೆ. ಚಳುವಳಿಯನ್ನು ರೂಪಿಸುತ್ತದೆ. ಹಾ.ಮಾ.ನಾ.

ಹೇಳಿರುವಂತೆ 'ಕನ್ನಡದ ಯಾವ ಸಮಸ್ಯೆಯನ್ನು ಅ.ನ.ಕೃ. ತಮಗೆ ಸಂಬಂಧಿಸಿದ್ದಲ್ಲ ಎಂದು ದೂರ ಇಡಲಿಲ್ಲ. ಪ್ರಾಂತ ನಿರ್ಮಾಣ ಕನ್ನಡ ಮಾಧ್ಯಮ ಹಿಂದೂ ಚಳುವಳಿ, ಬಳ್ಳಾರಿ ಸಮಸ್ಯೆ, ರಾಜಾಜಿಯಂತವರು ಕನ್ನಡಿಗರಿಗೆ ಎಸಗುವ ಅವಮಾನ. ಕನ್ನಡ ಕಲಾವಿದರ ದುಃಸ್ಥಿತಿ ಪ್ರತಿಯೊಂದನ್ನು ನಿಷ್ಠೆಯಿಂದ ಎತ್ತಿಕೊಂಡು, ನಿಷ್ಠುರ ಕಟ್ಟಿಕೊಂಡು ಹೋರಾಡಿದರು. ತಮ್ಮನ್ನು ಹಲವು ಕಾಲ ಕಾಳಗಗಳ ಕಲಿ' ಎಂದು ಕರೆಸಿಕೊಂಡಿರುವುದು ಸತ್ಯ. ಕನ್ನಡ ಮಾನ–ಅಪಮಾನ, ಜಯ–ಅಪಜಯವನ್ನು ತಮ್ಮದೇ ಎಂದು ಭಾವಿಸಿದ ಅವರು ಕನ್ನಡದ ಕಾರಣದೊಂದಿಗೆ ಈ ಬಗೆಯ ತಾದ್ಯಸ್ಯ ಹೊಂದಿದ್ದ ಲೇಖಕರು ಮೂವರು, ನಾಲ್ವರು, ಐವರನ್ನು ಎಣಿಸಲು ಕಷ್ಟಪಡಬೇಕು. ಈ ಮಾತು ಅ.ನ.ಕೃ.ರವರ ವ್ಯಕ್ತಿತ್ವವನ್ನು ಇಡಿಯಾಗಿ ಸೆರೆಹಿಡಿದಿದೆ. ಕನ್ನಡದ ಸರ್ವಾಂಗೀಣ ಬೆಳವಣಿಗೆಗೆ ದುಡಿದರು. ವಿವಿಧ ಸ್ತರದಲ್ಲಿ ಕನ್ನಡದ ಕೆಲಸ ಮಾಡಿದರು. ಕನ್ನಡತನ ಅವರಿಗೆ ಉಸಿರಾಟದಷ್ಟು ಸಲೀಸಾಗಿತ್ತು. ಪ್ರತಿಷ್ಠೆಗಾಗಿ ಕನ್ನಡದ ಕೆಲಸ ಮಾಡಲಿಲ್ಲ. ಅದು ಅವರಿಗೆ ಬದುಕಾಗಿತ್ತು ಎಂಬ ನರಹಳ್ಳಿಯವರ ನುಡಿ ಇಲ್ಲಿ ಹೊಸ ಅರ್ಥವನ್ನು ಹೊರಸೂಸುತ್ತಿದೆ. ಅ.ನ.ಕೃ.ರವರ ಕನ್ನಡ ಸಂಸ್ಕೃತಿಯೊಂದಿಗಿನ ಒಡನಾಟ ಕೇವಲ ವ್ಯವಹಾರಿಕವಾಗಿರದೆ ಅದು ಅವರ ಜೀವನದ ಭಾಗವಾಗಿತ್ತು. ಆಧುನೀಕತೆಯ ಶಿಕ್ಷಣದೊಂದಿಗೆ ಕನ್ನಡವನ್ನು ಮರೆಯುತ್ತಿರುವ ಇಂದಿನ ಪೀಳಿಗೆಗೆ ಅ.ನ.ಕೃ. ಒಂದು ಪ್ರತಿಮೆಯಾಗಿ ನಿಲ್ಲುತ್ತಾರೆ. ವೈಚಾರಿಕ ದೃಷ್ಟಿಕೋನ ನೀಡುವ ಗುರುವಾಗಿ ಕನ್ನಡ ದೇಸಿ ಸಂಸ್ಕೃತಿಯ ಆದರ್ಶ ಪ್ರತಿಪಾದಕರಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಅ.ನ.ಕೃಷ್ಣರಾಯ. (2006). ಸಾಹಿತ್ಯ ಮತ್ತು ಜೀವನ. ಸಾಗರ ಪ್ರಕಾಶನ, ಬೆಂಗಳೂರು.
- ಅ.ನ.ಕೃಷ್ಣರಾಯ. (2007). ಸಾಹಿತ್ಯ ಮತ್ತು ಯುಗಧರ್ಮ. ಸಾಗರ ಪ್ರಕಾಶನ, ಬೆಂಗಳೂರು.
- ನರಹಳ್ಳಿ ಬಾಲಸುಬ್ರಹ್ಮಣ್ಯ. (2007). ಅ.ನ.ಕೃ ಮತ್ತು ಕನ್ನಡ ಸಂಸ್ಕೃತಿ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.